ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

ಸಿ.ಸಿ. ನಂ. **1467/2023** ಫ್ರಾ.ಸಾ – **1**
ಚಾ.ಸಾ – **1**

ದಿನಾಂಕಃ **01.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ರಮ್ಯ ಆರ್ |
| ತಂದೆಯ ಹೆಸರು | : | ರವಿಕುಮಾರ್ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಮಹಿಳಾ ಪೇದೆ |
| ವಾಸ ಸ್ಥಳ | : | ಪೊನ್ನಂಪೇಟೆ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ದಿ. 07.07.2022 ರಿಂದ ಇಲ್ಲಿಯವರೆಗೆ ಪೊನ್ನಂಪೇಟೆ ಪೊ. ಠಾಣೆಯಲ್ಲಿ ಮಹಿಳಾ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 02.10.2023 ರಂದು ನನಗೆ ಬಾತ್ಮಿದಾರರು ಆರೋಪಿಯು ಅವರ ಹಳ್ಳಿಗಟ್ಟು ಗ್ರಾಮದ ಊರಿನಲ್ಲಿ ಪರವಾನಗಿ ಇಲ್ಲದೆ ಮಧ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂತು. ನಾನು ಇದನ್ನು ನಮ್ಮ ತನಿಖಾಧಿಕಾರಿ ಚಾಸಾ 12 ರವರಿಗೆ ಲಿಖಿತ ದೂರನ್ನು ಕೊಟ್ಟಿರುತ್ತೇನೆ. ಪ್ರ.ವ. ವರದಿ ದಾಖಲಿಸಿದ ನಂತರ ಚಾಸಾ 12 ರವರು ಪಂಚರಾದ ಚಾಸಾ 4 ಮತ್ತ 5 ರವರನ್ನು ಬರಮಾಡಿಕೊಂಡು ಅವರ ಒಪ್ಪಿದ್ದು ಕೃತ್ಯ ನಡೆದ ಸ್ಥಳಕ್ಕೆ 03.50 ಕ್ಕೆ ಹೋದೆವು. ಇಲಾಖಾ ವಾಹನವನ್ನು ದೂರದಲ್ಲಿ ನಿಲ್ಲಿಸಿ ಮನೆಗೆ ಹೋದಾಗ ಇಬ್ಬರು ಗ್ರಾಹಕರಿಗೆ ಆರೋಪಿ ಮಧ್ಯವನ್ನು ಮಾರಾಟ ಮಾಡುತ್ತಿದ್ದರು. ನಮ್ಮನ್ನು ನೋಡಿ ಗ್ರಾಹಕರು ಓಡಿ ಹೋದರು. ಆರೋಪಿ ಸರಿಯಾದ ಮಾಹಿತಿ ನೀಡುವುದಿಲ್ಲ. ಆರೋಪಿ ಮನೆಯನ್ನು ಶೋದಿಸಲು ಆಕೆಯು ಒಪ್ಪಿ ದ್ದು ಶೋಧನಾ ವಾರೆಂಟ್ ಅನ್ನು ನ್ಯಾಯಾಲಯದಿಂದ ತರಲು ಕಾಲವಕಾಶ

ಇಲ್ಲದಿರುವುದರಿಂದ ಸ್ವತಃ ತಯಾರಿಸಿಕೊಂಡು ಮನೆಯನ್ನು ಶೋದಿಸಿದೆವು. ಆರೋಪಿಯ ಮನೆಯ ಒಂದು ಕೋಣೆಯಲ್ಲಿ ಮಂಚದ ಕೆಳಗಡೆ 2 ರೆಟ್ಟಿನ ಬಾಕ್ಸ್ ಗಳು ಇದ್ದವು. ಆರೋಪಿಯು 90 M.L. Original choice deluxe brandy, 103 tetra packet ಗಳು, 90 M.L. Original choice deluxe whiskey 22 tetra packets ಇದ್ದವು. ಅವರ ಹತ್ತಿರ ಪರವಾನಗಿ ಇರಲಿಲ್ಲ. ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಶೇಖರಿಸಿರುವ ಬಗ್ಗೆ ಆರೋಪಿ ಹೇಳಿದರು. ನಂತರ ಮಾರಾಟ ಮಾಡಿ ಬಂದ ಹಣ ರೂ. 250/- ಮಂಚದ ಕೆಳಗಿನಿಂದ ಹಾಜರುಪಡಿಸಿದರು. ನಂತರ ಮಹಜರ್ ಮೂಲಕ ಇವುಗಳನ್ನು ವಶಪಡಿಸಿಕೊಂಡೆವು. ಮಹಜರ್ ಅನ್ನು ಚಾಸಾ 12 ರವರು ಹೇಳಿದಂತೆ ನಾನು ಬರೆದಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ನಿ. ಪಿ. 1 ಎಂದು, ಅದರಲ್ಲಿರುವ ಸಹಿಯನ್ನು ನಿ ಪಿ. 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ನಿ. ಪಿ. 2 ಎಂದು, ಅದರಲ್ಲಿರುವ ಸಹಿಯನ್ನು ನಿ ಪಿ. 2(ಎ) ಎಂದು ಗುರುತಿಸಲಾಯಿತು. ರೂ. 250/- ಹಣವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ 55 ಖಾಲಿ tetra packets ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು. ಮಾ 1 ಎಂದು, 2 ರಟ್ಟಿನ ಬಾಕ್ಸ್ ಗಳನ್ನು ಮು. ಮಾ 2 ಮತ್ತು 3 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಸಿ. ಪಿ ವಕೀಲರಿಂದಃ</u>

ಪೊನ್ನಂಪೇಟೆಯಿಂದ ಆರೋಪಿ ಮನೆ 1 ಕಿ. ಮೀ ದೂರ. 5 ನಿಮಿಷಕ್ಕೆ ಹೋದೆವು. ನಿ. ಪಿ. 2 ಮಹಜರ್ ನಲ್ಲಿ ನಮೂದಿಸಿರುವ VOSP ಎಂದು ನಮೂದಿಸಿದ್ದು ನ್ಯಾಯಾಲಯದ ಮುಂದೆ ಇರುವ ಟೆಟ್ರಾ ಪ್ಯಾಕೆಟ್ ಮೇಲೆ VSOP ಎಂದು ಇರುತ್ತದೆ ಎಂದರೆ ಸರಿ. ನಾನು ನಿ. ಪಿ. 1 ಅನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ

ಮನೆಯಲ್ಲಿ ನಾನು ಹೇಳಿದಂತೆ ಮಧ್ಯ ಸಿಕ್ಕಿರುವುದಿಲ್ಲ, ಆಕೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಹೇಳಿದ ಊರಿನಲ್ಲಿ ಮನೆ ಇಲ್ಲ ಎಂದರೆ ಸರಿಯಲ್ಲ. 2 ರೆಟ್ಟಿನ ಬಾಕ್ಸ್ ಗಳು ಮು. ಮಾ 2 ಮತ್ತು 3 ಎಂದು ಹೇಳಲು ಗುರುತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಖಾಲಿ ಟೆಟ್ರಾ ಪ್ಯಾಕೆಟ್ ಗಳು ಮತ್ತು 2 ರೆಟ್ಟಿನ ಬಾಕ್ಸ್ ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಮು. ಮಾ ಗಳಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ನಿ. ಪಿ. 2 ಕ್ಕೆ ಠಾಣೆಯಲ್ಲಿ ಬರೆದುಕೊಂಡು ಅಲ್ಲೇ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ಮಹಜರ್‌ನಲ್ಲಿರುವ ಬ್ರಾಂಡ್‌ನ ಮತ್ತು ನ್ಯಾಯಾಲಯದಲ್ಲಿರುವ ಟೆಟ್ರಾ ಪ್ಯಾಕೆಟ್ ಬ್ರಾಂಡ್‌ಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆರೋಪಿಯಿಂದ ಮನೆಯಿಂದ ಯಾವುದೇ ಹಣವನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.